ಡಾ॥ ಆರ್. ನಾಗನಗೌಡ.—ಸಚಿವರುಗಳು ಯಾವಾಗಲೂ ಪ್ರವಾಸ ಬಂದಾಗ ಬಳ್ಳಾರಿ, ಹೊಸಪೇಟೆ ಮತ್ತು ಸಿರಗುಪ್ಪ—ಈ ಮೂರು ತಾಲ್ಲೂಕುಗಳಿಗೆ ಬರುತ್ತಾರೆಯೇ ಹೊರತು ನಬ್‌ಮರ್ಡ್ ಏರಿಯಾ ಕಡೆಗೆ ಬರುವುದಿಲ್ಲ. ಮುರಾಮತ್ತು ಶಾಖೆಯ ಸಚಿವರು ಮಾತ್ರ ಒಂದು ಸಾರಿ ಆ ಕಡಗೆ ಬಂದಿದ್ದರು. ಈ ರೀತಿ ಇತರ ಸಚಿವರುಗಳು ಏಕೆ ಸ್ವಾಮಿ ಬರುವುದಿಲ್ಲ? (ನಗು)

ಶ್ರೀ ಬಿ. ಡಿ. ಜತ್ತಿ.—ತಾವು ಹೇಳಿದ ಪ್ರಕಾರ ಎಲ್ಲರೂ ಆ ಕಡೆಗೆ ಬರಲಿಕ್ಕೆ ಅವಶ್ಯವಾದ ಕಾರಣಗಳಿಲ್ಲದಿರಬಹುದು.

Sri C. J. MUCKANNAPPA.—We have no objection if the Ministers tour. But what is the principle that they have followed in undertaking these tours?

Sri B. D. JATTI.—One of the reasons is to inspect some of the works and offices; secondly, to look to the development activities carried on in that area; thirdly, to hear the grievances of the people and also just to keep in contact with the public regarding the policies of the Government.

ಶ್ರೀ ಎ. ಜೆ. ದೊಡ್ಡ ಪೇಟಿ.—ಪಿ.ಡಬ್ಲ್ಯು.ಡಿ. ಮಂತ್ರಿಗಳು ಎಲ್ಲೆ ಜವಾಬ್ದಾರಿ ಬೀಳುತ್ತದೆಯೋ ಎಂದು ಅವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಬರುತ್ತಿಲ್ಲ ಏನ್ನುವುದು ಸರಿಯೇ?

ಶ್ರೀ ಬಿ. ಡಿ. ಜತ್ತಿ.—ತಪ್ಪಿಸಿಕೊಳ್ಳುವುದಕ್ಕಾಗಿ ಎನೂ ಅಲ್ಲ. ಕಾಲ ಕಡಮೆ ಇರುವುದರಿಂದ, ಆಗಲೇ ನಿರ್ಣಯವನ್ನು ತೆಗೆದುಕೊಂಡು ಪರಿಶೀಲನೆ ಮಾಡುವುದಕ್ಕೆ ಅವಕಾಶವಿಲ್ಲದಿರಬಹುದು.

———

Housing Facilities to Harijans in Hutti Village.

*Q.—431. Smt. BASAVARAJESWARI (Manvi).—

Will the Government be pleased to state:—

(*a*) whether they are aware that the Harijans of Hutti village (Raichur District) removed from service by the Hutti Gold Mines authority are without any proper accommodation;

(*b*) if so, whether they will take steps to provide the required facilities to them to build a new Harijan Colony at Hutti village?

*A.—Sri B. D. JATTI (Chief Minister).—

(*a*) No.

(*b*) Does not arise.

ಶ್ರೀಮತಿ ಬಸವರಾಜೇಶ್ವರಿ.—(*a*) ಗೆ ಉತ್ತರವಾಗಿ ಇಲ್ಲ ಎಂದು ಹೇಳಲಾಗಿದೆ. ಈ ಸಂಬಂಧದಲ್ಲಿ ಸರಕಾರಕ್ಕೆ ಯಾವ ಮನವಿಗಳೂ ಬಂದಿಲ್ಲವೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯೆಯರಾದ ಶ್ರೀಮತಿ ಬಸವರಾಜೇಶ್ವರಿಯವರಿಂದಲೇ ಒಂದು ಮನವಿ ಬಂದಿದೆ ಮತ್ತೆಯಾರೂ ಕೊಟ್ಟಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಅದರ ಬಗ್ಗೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ನರ್ಪೆ ಕಂಪ್ಲೀಟು ಆಗಿದೆ ಮತ್ತು ಇದರ ಸ್ಕೀಮನ್ನು ಸ್ಯಾಂಕ್ಷನ್ನಿಗಾಗಿ ಗವರ್ನಮೆಂಟು ಆಫ್ ಇಂಡಿಯಾಕ್ಕೆ ಕಳುಹಿಸಿ ಅದು ಒಪ್ಪಿಗೆಯಾದ ಮೇಲೆ ಕಾರ್ಯಗಳನ್ನು ಪ್ರಾರಂಭ ಮಾಡಬಹುದು.

ಶ್ರೀಮತಿ ಬಸವರಾಜೇಶ್ವರಿ.—ಇದರ ಅಂದಾಜು ಎಷ್ಟು?

ಶ್ರೀ ಬಿ. ಡಿ ಜತ್ತಿ.—ಮೂವತ್ತು ಸಾವಿರ ರೂಪಾಯಿಗಳು.

ಶ್ರೀಮತಿ ಬಸವರಾಜೇಶ್ವರಿ.—ಕೂಡಲೇ ಇದರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಸ್ಕೀಮು ಅಪ್ರೂವ್ ಆದ ಕೂಡಲೇ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri M. C. NARASIMHAN.—As the Chairman of the Hutti Gold Mines, will you assure that the workers that are discharged would not be expelled from the quarters till they get housing accommodation?

Sri B. D. JATTI.—That will be taken into consideration.

———